ಆ) ೩೧-೧೨-೧೯೮೭ ಅಂತ್ಯದವರೆಗೆ ಖಾದಿ ಆಯೋಗದಿಂದ ಮಂಜೂರಾದ ಹಣದಲ್ಲಿ ರೂ. ೭೫,೩೮,೫೦೦ (ಸಾಲ ಹಾಗೂ ಸಹಾಯ ಧನ) ವಿನಿಯೋಗಿಸಲಾಗಿದೆ.

ಇ) ೧೯೮೭-೮೮ರ ಸಾಲಿಗೆ ಕ್ರಿಯಾ ಯೋಜನೆಯನ್ವಯ (ಆಕ್ಷನ್ ಪ್ಲಾನ್ ಆಫ್ ದಿ ಡಿಪಾರ್ಟ್‌ಮೆಂಟ್) ರೂ. ೧೨.೨೫ ಲಕ್ಷ ರೂ.ಗಳನ್ನು ಬಳ್ಳಾರಿ ಜಿಲ್ಲೆಗೆ ವಿಂಗಡಿಸಲಾಗಿದೆ. ೩೧-೧೨-೧೯೮೭ರ ಅಂತ್ಯದವರೆಗೆ ರೂ. ೧ ೦೭,೫೦೦-೦೦ ಗಳನ್ನು ಈಗಾಗಲೇ ಹಣ ಬಿಡುಗಡೆ ಮಾಡಲಾಗಿದೆ. ಮತ್ತು, ಉಳಿದಿರುವ ಹಣದ ಸದುಪಯೋಗಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅರಣ್ಯ ಇಲಾಖೆ ರೇಂಜರ್ ತರಬೇತಿಗಾಗಿ ಸಂದರ್ಶನ ಕರೆದಿರುವುದು

೪೭. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಿಂದ ಅರಣ್ಯ ಇಲಾಖೆಯಿಂದ ರೇಂಜರ್ ತರಬೇತಿಗಾಗಿ ಕರೆದಿರುವುದು ನಿಜವೆ

ಆ) ಹಾಗಿದ್ದಲ್ಲಿ, ಎಷ್ಟು ರೇಂಜರ್‌ಗಳನ್ನು ತರಬೇತಿಗೆ ಕರೆದಿದ್ದೀರಿ.

ಇ) ಇದರಲ್ಲಿ ಹರಿಜನ/ಗಿರಿಜನ ವರ್ಗದವರಿಗೆ ಸೇರಿದವರೆಷ್ಟು ?

ಶ್ರೀ ಜಿ. ಎಸ್. ಪಾಗಲಕೋಟಿ (ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು).—

ಅ) ನಿಜ

ಆ) ೧೯೮೫-೮೬

೨೫ ಅಭ್ಯರ್ಥಿಗಳನ್ನು ಕಳುಹಿಸಲಾಗಿದೆ,

೧೯೮೬-೮೭

೧೮ ಅಭ್ಯರ್ಥಿಗಳನ್ನು ತರಬೇತಿಗೆ ಕಳುಹಿಸಲಾಗಿದೆ.

೧೯೮೭-೮೮

೧೦ ಅಭ್ಯರ್ಥಿಗಳನ್ನು ತರಬೇತಿಗೆ ಕಳುಹಿಸಲಾಗಿದೆ.

ಇ) ೧೯೮೫-೮೬

ಹರಿಜನ-ಇಲ್ಲ

ಗಿರಿಜನ-ಇಲ್ಲ

೧೯೮೬-೮೭

ಹರಿಜನ-೨

ಗಿರಿಜನ-ಇಲ್ಲ

೧೯೮೭-೮೮

ಹರಿಜನ-ಇಲ್ಲ

ಗಿರಿಜನ-ಇಲ್ಲ

ಉಪ್ಪರಗಿ ಸಿಪ್ಪೆಯಿಂದ ಬಂದ ಆದಾಯ

೫೦. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯ ಅರಣ್ಯಗಳಲ್ಲಿ ಉಪ್ಪರಗಿ ಹಣ್ಣಿನ ಸಿಪ್ಪೆ ದೊರೆಯುತ್ತಿರುವುದು ನಿಜವೆ ?

ಆ) ಸಿರ್ಸಿಯಲ್ಲಿ ೧೯೮೫-೮೬ರ ಸಾಲಿನಲ್ಲಿ ಈ ಬಗ್ಗೆ ದರ ಪಟ್ಟಿಗಳನ್ನು ಕೊಟ್ಟಿದ್ದು ನಿಜವೆ ? ಹಾಗೂ ಅದರಿಂದ ೧೯೮೫-೮೬ ಹಾಗೂ ೧೯೮೬-೮೭ರಲ್ಲಿ ಬಂದ ಹಣವೆಷ್ಟು ?

ಇ) ೧೯೮೬-೮೭ರ ಸಾಲಿನಲ್ಲಿ ಹೆಚ್ಚು ಹಣ ಬರಲು ಕಾರಣವೇನು ?